ನೋಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ನಾವು ಯಾರ ಮೇಲೆ ಒತ್ತಡವನ್ನು ತಂದು ಈ ಬಿಲ್ಲನ್ನು ತಂದಿರುವುದಿಲ್ಲ. ಈ ಬಿಲ್ಲನ್ನು ತಂದಿರುವಂತಹ ಮೂಲ ಉದ್ದೇಶ ವಕೀಲರ ವೃತ್ತಿಯಲ್ಲಿರುವವರಿಗೆ ಅನುಕೂಲ ಮಾಡಿಕೊಡಬೇಕು. ಅವರದ್ದೇ ಆಗಿರುವಂತಹ ವೆಲ್‌ಫೇರ್ ಫಂಡ್ ಏನಿದೆ, ಅದರಲ್ಲಿ ಯಾರ್ಯಾರು ಅರ್ಹರಿದ್ದಾರೆ ಅವರಿಗೆ ಅದು ಮುಟ್ಟಬೇಕು, ಅದು ಸರಿಯಾಗಿ ಅವರಿಗೆ ತಲುಪುವ ಸಲುವಾಗಿ ಈ ಕಾನೂನಿನ ಬದಲಾವಣೆಯನ್ನು ಬಾರ್‌ಕೌನ್ಸಿಲ್‌ನ ಒಂದು ವಿನಂತಿ ಹಿನ್ನೆಲೆಯೊಳಗೂ ಸಹಿತ ಅವರ ಜೊತೆ ಚರ್ಚೆ ಮಾಡಿ ತಂದಿದ್ದೇವೆ. ಇದು ಒಂದು ರೀತಿ ಮಾನ್ಯ ಮಾಧುಸ್ವಾಮಿ ಹೇಳುವಂತಹ ಒಂದು ವಿಚಾರ ಏನಿದೆ ಅದು 60 ವರ್ಷಗಳ ನಂತರ ಅಥವಾ ಸರ್ಕಾರಿ ನೌಕರಿಯಿಂದ ನಿವೃತ್ತಿ ಯಾದ ಮೇಲೆ ಅಥವಾ ಜಡ್ಜ್‌ಗಳು ನಿವೃತ್ತಿಯಾದ ಮೇಲೆ ಈ ವೃತ್ತಿಗೆ ಬಂದು ಅವರು ಹೆಚ್ಚಿಗೆ ಲಾಭವನ್ನು ಪಡೆಯುವುದು ಸಾಧ್ಯತೆಯಾಗುತ್ತದೆ, ಅದು ಆಗಬಾರದು ಎಂಬ ಉದ್ದೇಶದಿಂದಲೇ 1 ಲಕ್ಷದ 50 ಸಾವಿರ ರೂಪಾಯಿಗಳು ಯಾವುದೇ ಕಾರಣಕ್ಕಾಗಿ ಹಾಗೆಯೇ ಹೊಸದಾಗಿ ಈ ವೃತ್ತಿಗೆ ಸೇರಿದವರಿಗೆ ಅದು ಸಿಕ್ಕಬಾರದು ಎಂಬುದು ಅವರ ಉದ್ದೇಶವಿದ್ದಂತೆ ಕಾಣುತ್ತದೆ. ಆದರೂ ಸಹ ತಾವು ಏನು ಕೆಲವು ವಿಚಾರಗಳನ್ನು ಎತ್ತಿದ್ದೀರಿ, ಈ ಹಿನ್ನೆಲೆಯೊಳಗೆ ನಾನು ಈ ಸದನಕ್ಕೆ ಒಂದು ಮಾತುಗಳನ್ನು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಬಾರ್ ಕೌನ್ಸಿಲ್‌ನ ಪ್ರತಿನಿಧಿಗಳನ್ನು ಹಾಗೂ ನಮ್ಮ ಫ್ಲೋರ್ ಲೀಡರ್ಸ್‌ನ್ನು ಕರೆದು ಇದರ ಬಗ್ಗೆ ಚರ್ಚೆ ಮಾಡಿದನಂತರ ಮತ್ತೇನು ಬದಲಾವಣೆಗಳನ್ನು ತರಬೇಕೋ ಅದನ್ನು ತರುತ್ತೇನೆ, ಆ ಸಂದರ್ಭದಲ್ಲಿ ಮತ್ತೆ ಇದನ್ನು ಪಾಸು ಮಾಡುವ ಸಲುವಾಗಿ ಸರ್ಕಾರ ಒತ್ತಾಯವನ್ನು ಮಾಡುತ್ತದೆ. It will lie over.

ಅಧ್ಯಕ್ಷರು : ಈಗ ಕರ್ನಾಟಕ ಪುರಸಭೆಗಳ ಮತ್ತು ಇತರ ಒಂದು ಕಾನೂನು ತಿದ್ದುಪಡಿ ವಿಧೇಯಕ ಅರ್ಡಿನೆನ್ಸ್ ರಿಪ್ಲೇಸ್‌ಮೆಂಟ್ ಬಿಲ್‌ನ್ನು ತಂದಿದ್ದಾರೆ. ಮಾನ್ಯ ಸಚಿವರು ವಿಧೇಯಕವನ್ನು ಮಂಡಿಸಬೇಕು.

ಶಾಸನ ರಚನೆ

(ಇ) ಕರ್ನಾಟಕ ಪೌರಸಭೆಗಳ ಮತ್ತು ಇತರ ಒಂದು ಕಾನೂನು (ತಿದ್ದುಪಡಿ) ವಿಧೇಯಕ 2005

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಸಚಿವರು) : ಮಾನ್ಯ ಅಧ್ಯಕ್ಷರೆ "2005ರ ಕರ್ನಾಟಕ ಪೌರಸಭೆಗಳ ಮತ್ತು ಇತರ ಒಂದು ಕಾನೂನು (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2005ರ ಕರ್ನಾಟಕ ಪೌರ ಸಭೆಗಳ ಮತ್ತು ಇತರ ಒಂದು ಕಾನೂನು (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."
ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಗಯಿತು.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು)

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಸಚಿವರು) : ಮಾನ್ಯ ಅಧ್ಯಕ್ಷರೆ, "2005ರ ಕರ್ನಾಟಕ ಪೌರಸಭೆಗಳ ಮತ್ತು ಇತರ ಒಂದು ಕಾನೂನು (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಪೌರಸಭೆಗಳ ಮತ್ತು ಇತರ ಒಂದು ಕಾನೂನು (ತಿದ್ದುಪಡಿ)

ವಿಧೇಯಕ 2005

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್. ಆರ್. ಮೋರೆ (ಪೌರಾಡಳಿತ ಸಚಿವರು) : ಮಾನ್ಯ ಅಧ್ಯಕ್ಷರೆ, "2005ರ ಕರ್ನಾಟಕ ಪೌರಸಭೆಗಳ ಮತ್ತು ಇತರ ಒಂದು ಕಾನೂನು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಮತ್ತು ಕರ್ನಾಟಕ ನಗರ ಮೂಲ ಸೌಕರ್ಯ ಮತ್ತು ಹಣಕಾಸು ನಿಗಮ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿಯ ಉದ್ದೇಶ ಎಂದರೆ ಹಿಂದೆ ಇರತಕ್ಕಂಥ ಈ ಸೆಬ್ಪ್ ಅಸೆಸ್‌ಮೆಂಟ್ ಬಗ್ಗೆ ಅನೇಕ ಸಲ ಚರ್ಚೆಯಾದವು. ಮೂರು-ನಾಲ್ಕು ಸಾರಿ ನಾವು ಎಲ್ಲಾ ಫ್ಲೋರ್ ಲೀಡರ್ಸ್‌ನ್ನು ಕರೆಸಿ ಮಾತನಾಡಿ ಇದನ್ನು ತಿದ್ದುಪಡಿ ಮಾಡಬೇಕೆಂದು ಹೇಳಿ ಅವರ ಕಡೆಯಿಂದ ಸೂಚನೆಯನ್ನು ಪಡೆದು ಇವತ್ತು ಈ ತಿದ್ದುಪಡಿಯನ್ನು ತರುತ್ತಿದ್ದೇವೆ. ಇದರ ಮೂಲ ಉದ್ದೇಶ ಎಂದರೆ –

(1) 2002–2003, 2003–2004 ಮತ್ತು 2004–2005ರ ವರ್ಷಗಳಲ್ಲಿ ವಿಧಿಸಿದ ಸ್ವತ್ತು ತೆರಿಗೆಯನ್ನು 2001–2002ನೇ ಸಾಲಿನಲ್ಲಿ ವಿಧಿಸಿದ್ದ ತೆರಿಗೆಯ ಎರಡೂ ವರೆಯಷ್ಟರಿಂದ ಎರಡು ವರ್ಷಕ್ಕೆ ಇಳಿಸುವುದು ;

(2) ಪೌರಸಭೆಗಳು ಮತ್ತು ಪೌರನಿಗಮಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವರ್ಗದ ಕಟ್ಟಡಗಳ ಸುತ್ತಲಿನ ಖಾಲಿ ಭೂಮಿಯ ಮೇಲೆ ಸ್ವತ್ತು ತೆರಿಗೆಯ ವಿನಾಯಿತಿ ನೀಡುವುದು ;

(3) ಒಂದು ಲಕ್ಷಕ್ಕೂ ಕಡಿಮೆ ಜನಸಂಖ್ಯೆಯನ್ನುಳ್ಳ ಪುರಸಭೆಗಳಲ್ಲಿ ಖಾಲಿ ಭೂಮಿಯ ಸಂಬಂಧದಲ್ಲಿ ತೆರಿಗೆಯ ಸಂಪೂರ್ಣ ವಿನಾಯಿತಿ ;

(4) 2005–2006ನೇ ವರ್ಷದಿಂದ ಪ್ರಾರಂಭಿಸಿ ಮೂರು ವರ್ಷಗಳಿಗೊಮ್ಮೆ ಸ್ವತ್ತು ತೆರಿಗೆಯನ್ನು ಹೆಚ್ಚಿಸುವುದು ಮತ್ತು ಹಾಗೆ ಹೆಚ್ಚಿಸುವುದಕ್ಕೆ ಮಾರ್ಗದರ್ಶನ ನೀಡುವುದು ;

(5) ಒಂದು ಲಕ್ಷಕ್ಕೂ ಕಡಿಮೆ ಜನಸಂಖ್ಯೆಯುಳ್ಳ ಪೌರಸಭೆಗಳಲ್ಲಿ ಇರುವಂಥ ವಾಣಿಜ್ಯ ಕಟ್ಟಡಗಳ ಮೇಲೆ ತೆರಿಗೆಯ ಗರಿಷ್ಟ ಮಿತಿಯನ್ನು ಶೇ 1.5 ರಿಂದ ಶೇ. 0.9ಕ್ಕೆ ಹಾಗೂ ವಾಸಗೃಹದ ಕಟ್ಟಡಗಳ ಸಂಬಂಧದಲ್ಲಿ ಶೇ. 1.0 ಯಿಂದ ಶೇ. 0.6ಕ್ಕೆ ಇಳಿಸುವುದು ;

(6) ತತ್ಪರಿಣಾಮದ ಇತರ ಕೆಲವು ತಿದ್ದುಪಡಿಗಳನ್ನೂ ಮಾಡಲಾಗಿದೆ.

ಈ ವಿಧೇಯಕವನ್ನು ಕರ್ನಾಟಕ ಪೌರಸಭೆಗಳ (ತಿದ್ದುಪಡಿ ಆಧ್ಯಾದೇಶ, 2004 (2004ರ ಕರ್ನಾಟಕ ಅಧ್ಯಾದೇಶ 3) ಮತ್ತು ಕರ್ನಾಟಕ ಪೌರನಿಗಮಗಳ (ತಿದ್ದುಪಡಿ) ಅಧ್ಯಾದೇಶ, 2004